1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

Spl.C.153/2023

ದಿಃ 04.01.2025
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-2 Pw-6

ಹೆಸರು : ದರ್ಶನ್
ತಂದೆಯ ಹೆಸರು : ಹನುಮರಾಜು
ವಯಸ್ಸು : 20 ವರ್ಷ
ಉದ್ಯೋಗ : ಖಾಸಗಿ ಕೆಲಸ
ವಾಸಸ್ಥಳ : ಹೊಸೂರುಗೊಲ್ಲಹಳ್ಳಿ, ರಾಮನಗರ ತಾಲ್ಲೂಕು

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ದಿಃ25.07.2023ರಂದು ಬೆಳಿಗ್ಗೆ 10.00ರಿಂದ 11.00 ಗಂಟೆಯವರೆಗೆ ಚಾಸಾ.1 ಈತನ ತೋರಿಕೆಯ ಮೇರೆಗೆ ಪೊಲೀಸರು ಚಾಸಾ.6 ಈತನ ಮನೆಯ ಮುಂದೆ ಇರುವ ರಸ್ತೆ ಬಳಿ ಬಂದು ಒಂದು ಸ್ಥಳ ಪಂಚನಾಮೆಯನ್ನು ಮಾಡಿ, ಅದರಡಿಯಲ್ಲಿ ಒಂದು ಒಡೆದ ಸಿಮೆಂಟ್ ಇಟ್ಟಿಗೆಯನ್ನು ಅಮಾನತ್ತುಪಡಿಸಿಕೊಂಡು ಅದರ ಮೇಲೆ ನನ್ನ ಸಹಿಯನ್ನು ಪಡೆದಿರುತ್ತಾರೆ.

2. ಸದರಿ ಸ್ಥಳ ಪಂಚನಾಮೆಯನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ ಅದನ್ನು ನಿ.ಪಿ.7 ಎಂದು, ಮತ್ತು ಅದರ ಮೇಲಿರುವ ನನ್ನ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು.

3. ಅದೇ ಸಮಯದಲ್ಲಿ ನಿ.ಪಿ.7ಕ್ಕೆ ಸಂಬಂಧಿಸಿದಂತೆ ಪೊಲೀಸರು 4 ವರ್ಣರಂಜಿತ ಛಾಯಾಚಿತ್ರಗಳನ್ನು ತೆಗೆಸಿದ್ದು, ಅವುಗಳನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ ಕ್ರಮವಾಗಿ ನಿ.ಪಿ.8ರಿಂದ 11 ಎಂದು ಗುರುತಿಸಲಾಯಿತು.

4. ಸದರಿ ನಿ.ಪಿ.7ರ ಅಡಿಯಲ್ಲಿ ಅಮಾನತ್ತುಪಡಿಕೊಂಡ ಒಡೆದ ಸಿಮೆಂಟಿನ ಇಟ್ಟಿಗೆಯನ್ನು ನೋಡಿ ಗುರುತಿಸುತ್ತಿರುವುದರಿಂದ ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಶ್ರೀ. ಎಸ್.ಜಿ.ಎಸ್., ವಕೀಲರಿಂದ ಆರೋಪಿಗಳ ಪರವಾಗಿಃ</u>

5. ನಾನು ಐ.ಟಿ.ಐ. ಓದಿಕೊಂಡಿರುತ್ತೇನೆ.

6. ನಾನು ಮತ್ತು ಚಾಸಾ.1 ಪರಸ್ಪರ ಸ್ನೇಹಿತರು ಎಂಬುದು ಸರಿ.

7. ನಾನು ಮತ್ತು ಚಾಸಾ.1 ಒಂದೇ ಶಾಲೆಯಲ್ಲಿ ಓದಿರುತ್ತೇವೆ.

8. ಶಾಲೆಯಲ್ಲಿ ನಾವಿಬ್ಬರೂ ಒಟ್ಟಿಗೆ ಇರುತ್ತಿದ್ದೆವು ಎನ್ನುವುದು ಸರಿ.

9. ಈಗ ನಾವು ಪರಸ್ಪರ ಒಬ್ಬರಿಗೊಬ್ಬರು ಸಹಾಯಕರಾಗಿ ಹೊಂದಾಣಿಕೆಯಿಂದ ಹೋಗುತ್ತಿದ್ದೇವೆ ಎನ್ನುವುದು ಸರಿ.

10. ಚಾಸಾ.1 ಮತ್ತು ನನ್ನ ಊರು ಬೇರೆ ಬೇರೆಯಾಗಿರುತ್ತದೆ ಎನ್ನುವುದು ಸರಿ.

11. ಚಾಸಾ.1 ಒಂದು ಸಿಗ್ನೇಚರ್ ಮಾಡಬೇಕಾಗಿರುತ್ತದೆ ಎಂದು ಅದಕ್ಕೆ ಬಂದು ಮಾಡು ಎಂದು ಸಹಾಯ ಕೇಳಿದಾಗ ನಾನು ಅದಕ್ಕೆ ಒಪ್ಪಿಕೊಂಡು ಸಹಿ ಮಾಡಿರುತ್ತೇನೆ ಎನ್ನುವುದು ಸರಿ.

12. ನಿ.ಪಿ.7ರಲ್ಲಿ ಏನು ಬರೆದಿದೆ ಎಂದು ನನಗೆ ಮಾಹಿತಿ ಇರುವುದಿಲ್ಲ ಎನ್ನುವುದು ಸರಿಯಲ್ಲ.

13. ನಾನು ಪ್ರಸ್ತುತ ಪ್ರಕರಣದಲ್ಲಿನ ಯಾವುದೇ ಘಟನೆಯನ್ನು ಕುರಿತು ಮಾಹಿತಿ ಇರದೇ ಇದ್ದರೂ ಸಹ, ಚಾಸಾ.1 ಈತನು ನನ್ನ ಗೆಳೆಯನಾಗಿರುವುದರಿಂದ ತನಗೆ ನನ್ನಿಂದ ಸಹಾಯ ಪಡೆಯುವ ಉದ್ದೇಶದಿಂದ ಸಾಕ್ಷಿದಾರನೆಂದು ನನ್ನ ಹೆಸರನ್ನು ನಮೂದಿಸಿ, ತನಗೆ ಪೂರಕವಾಗುವ ರೀತಿಯಲ್ಲಿ ಸಾಕ್ಷಿ ನುಡಿಯಲು ಹೇಳಿರುವ ಕಾರಣ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

14. ಚಾಸಾ.3 ನನ್ನ ಸ್ನೇಹಿತನಾಗಿರುವುದಿಲ್ಲ.

15. ನಾನು, ಚಾಸಾ.1 ಮತ್ತು 3 ಪರಸ್ಪರ ಸ್ನೇಹಿತರಾಗಿದ್ದು, ಚಾಸಾ.1 ಈತನು ಪ್ರೇರಣೆಯ ಮೇರೆಗೆ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

16. ಸಾಕ್ಷಿ ಸ್ವತಃ ನುಡಿಯುತ್ತಾರೆ, ಚಾಸಾ.1 ಮತ್ತು ನಾನು ಮಾತ್ರ ಸ್ನೇಹಿತರಾಗಿದ್ದು, ಚಾಸಾ.3 ನಮಗೆ ಸ್ನೇಹಿತನಾಗಿರುವುದಿಲ್ಲ ಎಂದು.

17. ಮು.ಮಾ.1 ಈ ಪ್ರಕರಣರಕ್ಕೆ ಸಂಬಂಧಿಸಿದ್ದು ಇರದೇ ಇದ್ದರೂ ಸಹ, ಈಗ ಚಾಸಾ.1 ಈತನ ಮಾತು ಕೇಳಿ ಅದು ಈ ಪ್ರಕರಣಕ್ಕೆ ಸಂಬಂಧಿಸಿದ್ದು ಎಂದು ಸುಳ್ಳು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

18. ಯಾವುದೇ ಘಟನೆ ನಡೆಯದೇ ಇದ್ದರೂ ಸಹ, ಚಾಸಾ.1 ಈತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.